**ದಿನಾಂಕಃ 13.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಎದುರುದಾರರ ಪರ ವಕೀಲರಿಂದಃ**

ಅರ್ಜಿದಾರರ ಸಾಕ್ಷಿದಾರರು ಹಾಜರಿರುತ್ತಾರೆ. ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ ಅದರಲ್ಲಿ ತಿಳಿಸಿದ ಎಲ್ಲಾ ಅಂಶಗಳು ಸತ್ಯದಿಂದ ಕೂಡಿದ್ದು ನನ್ನ ಹೇಳಿಕೆಯ ಮೇರೆಗೆ ದಾಖಲಿಸಲಾಗಿರುತ್ತದೆ ಎಂದು ಪ್ರಮಾಣಿಕರಿಸಿರುತ್ತಾರೆ ಆರ್.ಡಬ್ಲೂ-1 ಎಂದು ವಿಚಾರಿಸಲಾಯಿತು.

ಅಧಿಕಾರ ಪತ್ರ ನಿಆರ್-1 ಎಂದು, ಪಾಲಿಸಿ ಪ್ರತಿ ನಿಆರ್ -2 ಎಂದು, ಅಂತಿಮ ವರದಿ ನಿಆರ್-3 ಎಂದು, ಮಾಲೀಕನಿಗೆ ನೀಡಿರುವ ನೋಟಿಸ್ ನಿಆರ್-4 ಎಂದು, ಅಂಚೆ ಲಕೋಟೆ ನಿಆರ್-5 ಎಂದು, ಸದರಿ ಲಕೋಟೆ ಒಳಗಿರುವ ನೋಟಿಸ್ ನಿಆರ್-5(ಎ) ಎಂದು ಗುರುತಿಸಲಾಗಿದೆ

**ಪಾಟೀ ಸವಾಲು ಅರ್ಜಿದಾರರ ಪರ ವಕೀಲರಿಂದಃ**

ಅಪಘಾತಪಡಿಸಿದ ಬೈಕ್ ನಮ್ಮ ಕಂಪನಿಯ ವಿಮೆ ಒಳಪಟ್ಟಿದ್ದುಅಪಘಾತದ ಸಮಯದಲ್ಲಿ ವಿಮೆ ಹಾಗೂ ಚಾಲಕನ ಚಾಲನ ಪತ್ರ ಚಾಲ್ತಿಯಲ್ಲಿತ್ತು ಎಂದರೆ ಸರಿ. ಅಪಘಾತ ಅರ್ಜಿದಾರರ ಬೈಕ್ ಚಾಲಕನಿಂದ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪರಿಹಾರ ಬಾದ್ಯಸ್ಥಯಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು 1ನೇ ಎದುರುದಾರ ಪರ ವಕೀಲರಿಂದಃ**

ಅಪಘಾತಪಡಿಸಿದ ಬೈಕ್ ನಮ್ಮ ಕಂಪನಿಯ ವಿಮೆ ಒಳಪಟ್ಟಿದ್ದುಅಪಘಾತದ ಸಮಯದಲ್ಲಿ ವಿಮೆ ಹಾಗೂ ಚಾಲಕನ ಚಾಲನ ಪತ್ರ ಚಾಲ್ತಿಯಲ್ಲಿತ್ತು ಎಂದರೆ ಸರಿ. ಅಪಘಾತ ಅರ್ಜಿದಾರರ ಬೈಕ್ ಚಾಲಕನಿಂದ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪರಿಹಾರ ಬಾದ್ಯಸ್ಥಯಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಪಾಲಿಸಿ ಚಾಲ್ತಿಯಲ್ಲಿರುವುದರಿಂದ ಪರಿಹಾರದ ಹಣ ಕೊಡಲು ಬಾದ್ಯಸ್ಥರುತ್ತಾರೆ, 1ನೆ ಎದುರುದಾರರು ಅಲ್ಲ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ**